ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 66-73
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ತುಮಕೂರು ಜಿಲ್ಲೆಯ ಶಾಸನೋಕ್ತ ಜೈನ ಬಸದಿಗಳು

**ಡಾ. ಪ್ರಕಾಶ ಎನ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಾರಾಣಿ ಮಹಿಳಾ ಕಾಲೇಜು, ಮೈಸೂರು

***Abstract:***
*ತುಮಕೂರು ಜಿಲ್ಲೆಯು ಪ್ರಾಚೀನ ಜೈನ ಧರ್ಮ, ಸಂಸ್ಕೃತಿ ಮತ್ತು ವಾಸ್ತುಶಿಲ್ಪದ ಪ್ರಮುಖ ನೆಲೆಗಳಲ್ಲಿ ಒಂದಾಗಿದೆ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಂಡುಬರುವ ಶಾಸನಗಳು ಜೈನ ಬಸದಿಗಳ ಸ್ಥಾಪನೆ, ಅಭಿವೃದ್ಧಿ ಹಾಗೂ ಧಾರ್ಮಿಕ–ಸಾಮಾಜಿಕ ಪ್ರಾಮುಖ್ಯತೆ ಕುರಿತು ಮಹತ್ವದ ಮಾಹಿತಿಯನ್ನು ನೀಡುತ್ತವೆ. ಶಾಸನೋಕ್ತ ಬಸದಿಗಳ ಮೂಲಕ ಆ ಕಾಲದ ರಾಜರು, ದಾನಿಗಳು, ವ್ಯಾಪಾರಿಗಳು ಮತ್ತು ಜೈನ ಸಮುದಾಯದ ಧಾರ್ಮಿಕ ಕೊಡುಗೆಗಳನ್ನು ತಿಳಿಯಬಹುದಾಗಿದೆ. ಬಸದಿಗಳ ವಾಸ್ತುಶೈಲಿ, ಮೂರ್ತಿಶಿಲ್ಪ, ಶಾಸನಗಳು ಮತ್ತು ದಾನಪರಂಪರೆಗಳು ಅಂದಿನ ಜೈನ ಕಲಾ–ಸಾಂಸ್ಕೃತಿಕ ಪರಂಪರೆಯ ವೈಶಿಷ್ಟ್ಯವನ್ನು ಪ್ರತಿಬಿಂಬಿಸುತ್ತವೆ. ಈ ಅಧ್ಯಯನವು ತುಮಕೂರು ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಜೈನ ಬಸದಿಗಳನ್ನು ಗುರುತಿಸಿ, ಅವುಗಳ ಐತಿಹಾಸಿಕ, ಧಾರ್ಮಿಕ, ಸಾಮಾಜಿಕ ಮತ್ತು ವಾಸ್ತುಶಿಲ್ಪೀಯ ಮಹತ್ವವನ್ನು ವಿಶ್ಲೇಷಿಸುತ್ತದೆ.*

***Keywords:*** *ತುಮಕೂರು ಜಿಲ್ಲೆ, ಜೈನ ಧರ್ಮ, ಜೈನ ಬಸದಿಗಳು, ಶಾಸನಗಳು, ವಾಸ್ತುಶಿಲ್ಪ.*

## ಪೀಠಿಕೆ

ಜೈನಧರ್ಮ ಪ್ರಾಚೀನ ಧರ್ಮವಾಗಿದ್ದು, ಆದಿನಾಥ ಅಥವಾ ವೃಷಭದೇವನಿಂದ ಆರಂಭವಾದ ಜೈನ ಪರಂಪರೆ ಕ್ರಿ.ಪೂ 6ನೇ ಶತಮಾನದಲ್ಲಿ ಮಹಾವೀರರಿಂದ ಪ್ರವರ್ಧಮಾನಕ್ಕೆ ಬಂದಿತು. ಪ್ರತಿಯೊಂದು ಧರ್ಮೀಯರು ತಮ್ಮ ಧರ್ಮದ ಬೋಧನೆ, ಪ್ರಾರ್ಥನೆ, ಪ್ರವಚನ ಪೂಜೆ ಕೈಂಕರ್ಯಗಳಾಗಿ ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸಿಕೊಳ್ಳುವಂತೆ ಜೈನ ಧರ್ಮೀಯರು ಸಹ ಧರ್ಮ ಸಂಕೇತವಾಗಿ ಬಸದಿಗಳನ್ನು ನಿರ್ಮಿಸಲಾರಂಭಿಸಿದರು. ಬಸದಿಯ ನಿರ್ಮಾಣದ ಪರಂಪರೆ ಅಧ್ರುವಾನುಪ್ರೇಕ್ಷೆಯಲ್ಲಿ ಬರುವ ಸಗರನ ಕಥೆಯಲ್ಲಿ ಉಲ್ಲೇಖವಾಗಿರುವಂತೆ "ಕೈಲಾಸ ಪರ್ವತದಲ್ಲಿ ಭರತ ಚಕ್ರವರ್ತಿಯು ತನ್ನ ತಂದೆಗಾಗಿ ಚೈತ್ಯಾಲಯ ನಿರ್ಮಿಸಿದ ಉಲ್ಲೇಖವಿದೆ"[1] ಇದರಿಂದ ಬಸದಿ ನಿರ್ಮಿಸುವ ಪರಂಪರೆ ವೃಷಭದೇವನ ಕಾಲದಲ್ಲಿಯೇ ಆರಂಭವಾಗಿರುವುದು ಸ್ಪಷ್ಟವಾಗುತ್ತದೆ.

ಬಸದಿ ಎಂಬ ಪದದ ಪ್ರಯೋಗ ಮತ್ತು ರಚನೆಯು ಸಿವಮಾರನ 'ಬಸದಿ'[2] ಎಂಬುದರ ಉಲ್ಲೇಖದಲ್ಲಿ ಮೊದಲು ಪ್ರಯೋಗವಾಗಿರುವುದು ಶ್ರವಣಬೆಳಗೊಳ ಶಾಸನದಿಂದ ಹಾಗೂ ವಡ್ಡರಾಧನೆಯಲ್ಲಿ ಬಸದಿ ಎಂಬ ಪದ 9ನೇ ಶತಮಾನದಲ್ಲಿ ಉಲ್ಲೇಖವಾಗಿರುವುದು ಕಂಡು ಬರುತ್ತದೆ.

ಬಸದಿಗಳನ್ನು ಜಿನಗೃಹ, ಚೈತ್ಯಾಲಯ, ಬಸದಿ ಇನ್ನೂ ಮುಂತಾದ ಹೆಸರುಗಳಿಂದ ಕರೆಯುವುದನ್ನು ಕಾಣಬಹುದು. ನಾಗವರ್ಮನು ಬಸದಿಯನ್ನು

***Please cite this article as:*** ಪ್ರಕಾಶ, ಎನ್. (2026). ತುಮಕೂರು ಜಿಲ್ಲೆಯ ಶಾಸನೋಕ್ತ ಜೈನ ಬಸದಿಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(3), 66–73

ಆಯರ್ತವೆಂಬುದಾಗಿಯೂ ಉಲ್ಲೇಖಿಸಿದ್ದಾನೆ.[3] ಬಸದಿಗಳ ರಚನೆಯಲ್ಲಿ ಕೃತಿಮ ಬಸದಿಗಳು ಹಾಗೂ ಅಕೃತಿಮ ಬಸದಿಗಳು ಎಂಬುದಾಗಿ ಎರಡು ವಿಧದಲ್ಲಿ ಕಾಣಬಹುದು. ಪ್ರಕೃತಿ ನಿರ್ಮಿತ ಅಕೃತಿಮ ಬಸದಿಗಳು, ಮಾನವ ನಿರ್ಮಿತ ಕೃತಿಮ ಬಸದಿಗಳನ್ನು ಕಾಣಬಹುದು.

ತುಮಕೂರು ಜಿಲ್ಲೆಯು ಜೈನ ಪರಂಪರೆಗೆ ತನ್ನದೇಯಾದ ಕೊಡುಗೆಯನ್ನು ನೀಡುವುದರ ಜೊತೆಗೆ ಧಾರ್ಮಿಕ ಸ್ಫೂರ್ತಿಗೆ, ಪ್ರಚಾರಕ್ಕೆ, ಪ್ರಸಾರಕ್ಕೆ, ಮೋಕ್ಷಕ್ಕೆ ಹಾಗೂ ಮುಕ್ತಿಗೆ ಹಲವು ಬಸದಿಗಳನ್ನು ನಿರ್ಮಿಸಿರುವುದನ್ನು ಶಾಸನ ಉಲ್ಲೇಖಗಳಿಂದ ಗುರುತಿಸಬಹುದು ಅಂತಹವುಗಳೆಂದರೆ

## ಶಾಸನೋಕ್ತ ಬಸದಿಗಳು

### ತ್ಯಾಗಟೂರು

ಗಂಗರ ಶಿವಮಾರನ ಕಾಲದಲ್ಲಿ ಸಾಮಂತನಾಗಿದ್ದ ಮುತ್ತುರಾಜನೆಂದು ಪ್ರಖ್ಯಾತನಾಗಿದ್ದ ಅಜ್ಜವರ್ಮನಿದ್ದ. ಈತನ ಹೆಂಡತಿ ಕಮಲಾ, ಇವರಿಬ್ಬರ ಪುತ್ರಿ ಮಾರೇತಿ ಈಕೆಯನ್ನು ಅವಿಜಾರನೃಪ ಎಂಬುವನಿಗೆ ವಿವಾಹ ಮಾಡಲಾಗಿತ್ತು. ಇವರ ಮಗಳು ಕೊಂಕೇತಿ. ಕೊಂಕೇತಿಯನ್ನು ಸಿಂಧುರಾಜನಿಗೆ ವಿವಾಹ ಮಾಡಲಾಗಿತ್ತು. ಕೊಂಕೇತಿ ತ್ಯಾಗಟೂರಿನ ನೈರುತ್ಯ ದಿಕ್ಕಿನಲ್ಲಿ ಒಂದು ಜಿನಾಲಯವನ್ನು ನಿರ್ಮಿಸಿದಳು. ಈಕೆ ಕುಮಾರನಂದಿಯ ಶಿಷ್ಯೆಯಾಗಿದ್ದು, ಕುಮಾರನಂದಿಗಾಗಿ ಕ್ರಿ.ಶ.717ರಲ್ಲಿ ಜಿನಾಲಯವನ್ನು ನಿರ್ಮಿಸಿ ಕೊಟ್ಟ ವಿಷಯವನ್ನು ಹಾಗೂ ಸಿವಮಾರನು ಕೊಂಕೇತಿ ಮನವಿಮಾಡಿಕೊಂಡ ಕಾರಣ ಈ ಬಸದಿಗೆ ದೊಡ್ಡಕೆರೆಯ ಹನ್ನೆರಡು ಖಂಡುಗ ಭೂಮಿಯನ್ನು ದಾನ ನೀಡಿದ ವಿಷಯವನ್ನು ತಿಳಿಸುತ್ತದೆ.[4]

### ಕಡಬ ಬಸದಿ

ಚಾಲುಕ್ಯ ಚಕ್ರವರ್ತಿ ಚಕ್ರರಾಜನ ಮಗ ವಿಮಲಾದಿತ್ಯನಿಗೆ ಶನಿ ಹೆಗಲೇರಿತ್ತು. ಆ ಸಂದರ್ಭದಲ್ಲಿ ಆರ್ಕಕೀರ್ತಿ ಎಂಬ ಜೈನಮುನಿಯು ವಿಮಲಾದಿತ್ಯನ ಶನಿಕಾಟವನ್ನು ನಿವಾರಿಸಿದನು. ಆದ ಕಾರಣ, ವಿಮಲಾದಿತ್ಯನು ಇಡಗೂರು ವಿಭಾಗದ ಜಾಲಮಂಗಳ ಗ್ರಾಮವನ್ನು ಆರ್ಕಕೀರ್ತಿ ಜೈನಮುನಿಗೆ ದಾನ ನೀಡಿದ ವಿಷಯವನ್ನು ಉಲ್ಲೇಖಿಸಿದೆ.[5]

### ಹೇಮಾವತಿ ಬಸದಿ

ಪಲ್ಲವರ ಕುಲತಿಲಕನೆನಿಸಿದ್ದ ಮಹೇಂದ್ರಾಧಿ ರಾಜನ ಮಕ್ಕಳಾದ ಬರಗೂರನ್ನು ಆಳ್ವಿಕೆ ಮಾಡುತ್ತಿದ್ದ ಬಿಜ್ಜ ಮಾಹಾದೇವಿಯು, ಧರ್ಮವೋಳಲನ್ನು ಆಳ್ವಿಕೆ ಮಾಡುತ್ತಿದ್ದ ಪರಮ ಮಹಾದೇವಿಯು, ಸಿಯುವೂರನ್ನು ಆಳ್ವಿಕೆ ಮಾಡುತ್ತಿದ್ದ ತ್ರೈಲೋಕ ಮಹಾದೇವಿ–ದೊಂಬಬ್ಬೆಯು ಈ ಮೂವರು ಹೇಮಾವತಿ ಬಸದಿಗೆ ದಾನ ನೀಡಿದ ಅಂಶ ತಿಳಿದು ಬರುತ್ತದೆ.[6]

### ಕೈದಾಳ ಬಸದಿ

ಹೊಯ್ಸಳರ ಅರಸ ಪ್ರಥಮ ನರಸಿಂಹನ ಸಾಮಂತನಾದ ಬಾಚಿದೇವನು ಸರ್ವಧರ್ಮಗಳಿಗೂ ಆದ್ಯತೆ ನೀಡಿದ್ದನು. ಈತನು ಶೈವಧರ್ಮವನ್ನು ಅನುಸರಿಸುತ್ತಿದ್ದರೆ, ಈತನ ಪತ್ನಿ ಭೀಮಲೆ ಜೈನಧರ್ಮವನ್ನು ಪಾಲಿಸುತ್ತಿದ್ದಳು. ಭೀಮಲೆ ಮರಣ ಹೊಂದಿದ ನಂತರ, ಆಕೆಯ ಸ್ಮರಣಾರ್ಥವಾಗಿ ಬಾಚಿದೇವನು 'ಭೀಮಜಿನಾಲಯ' ಎಂಬ ಹೆಸರಿನ ಜೈನಾಲಯವನ್ನು ನಿರ್ಮಿಸಿದನು. ಈ ಜೈನಾಲಯದಲ್ಲಿ ಚನ್ನಪಾರ್ಶ್ವನಾಥ ದೇವರನ್ನು ಪ್ರತಿಷ್ಠಾಪಿಸಲಾಗಿತ್ತು. ಇದರ ಜೊತೆಗೆ ಬಾಚಿದೇವನು 'ಭೀಮಸಮುದ್ರ'ವನ್ನು ನಿರ್ಮಿಸಿ, ಅದನ್ನು ಬಸದಿಯ ನಿರ್ವಹಣೆಗಾಗಿ ದಾನವಾಗಿ ನೀಡಿದ ವಿಷಯವನ್ನು ಶಾಸನವು ತಿಳಿಸುತ್ತದೆ. ಹೀಗಾಗಿ, ಪತ್ನಿಯ ಸ್ಮರಣಾರ್ಥವಾಗಿ ನಿರ್ಮಿಸಲಾದ ಕೈದಾಳದ ಈ ಬಸದಿ ತುಮಕೂರು ಜಿಲ್ಲೆಯ ಪ್ರಮುಖ ಪ್ರಾಚೀನ ಜೈನ ಬಸದಿಗಳಲ್ಲಿ ಒಂದಾಗಿದ್ದು, ಧಾರ್ಮಿಕ ಸಹಿಷ್ಣುತೆ ಮತ್ತು ಜೈನ ಧರ್ಮದ ಬೆಳವಣಿಗೆಗೆ ಸಾಕ್ಷಿಯಾಗಿದೆ.[7]

**ಕೊತ್ತಗೆರೆ ಬಸದಿ**

ಕೊತ್ತಗೆರೆಯ ಶಾಸನವು ತೇದಿರಹಿತವಾಗಿದ್ದು, ವಿದ್ವಾಂಸರು ಇದನ್ನು 13ನೇ ಶತಮಾನಕ್ಕೆ ಸೇರಿದ್ದೆಂದು ಅಭಿಪ್ರಾಯಪಟ್ಟಿದ್ದಾರೆ. ಕೊತ್ತಗೆರೆಯಲ್ಲಿರುವ ಬಸದಿಯ ಪೀಠದಲ್ಲಿನ ಶಾಸನವು ಮೂಲಸಂಘ, ದೇಶೀಯ ಗಣ, ಪುಸ್ತಕಗಚ್ಛ ಮತ್ತು ಕೊಂಡಕುಂದಾನ್ವಯಕ್ಕೆ ಸೇರಿದ ಇಂಗಳೇಶ್ವರದ ಹರಿಚಂದ್ರದೇವರ ಶಿಷ್ಯರಾದ ಮಾಘನಂದಿದೇವರು 'ಶಾಂತಿನಾಥದೇವ'ರ' ವಿಗ್ರಹವನ್ನು ಮಾಡಿಸಿದ ವಿಷಯವನ್ನು ಉಲ್ಲೇಖಿಸುತ್ತದೆ. ಈ ಶಾಸನವು ಅಂದಿನ ಜೈನ ಧಾರ್ಮಿಕ ಪರಂಪರೆ, ಆಚಾರ್ಯ ಪರಂಪರೆ ಹಾಗೂ ವಿಗ್ರಹ ಪ್ರತಿಷ್ಠಾಪನೆಯ ಕುರಿತು ಮಹತ್ವದ ಮಾಹಿತಿಯನ್ನು ಒದಗಿಸುತ್ತದೆ. ಪ್ರಸ್ತುತ ಕೊತ್ತಗೆರೆ ಬಸದಿ ಅಜೀರ್ಣಾವಸ್ಥೆಯಲ್ಲಿದ್ದು, ಅದರ ಸಂರಕ್ಷಣೆ ಮತ್ತು ಪುನರುಜ್ಜೀವನದ ಅಗತ್ಯವಿದೆ.[8]

**ಹುಳಿಯೂರು ಬಸದಿ**

ಹೊಯ್ಸಳರ ದೊರೆ ಪ್ರಥಮ ನರಸಿಂಹನ ಸಾಮಂತನಾದ ಗೋವಿದೇವನ ಪತ್ನಿ ಶ್ರೀಯಾದೇವಿಯು ಚಂದ್ರಾಯಣದೇವರ ಶಿಷ್ಯೆಯಾಗಿದ್ದಳು. ಆಕೆ ಬಸದಿಗೆ ಜಿನಮೂರ್ತಿಯನ್ನು ಮಾಡಿಸಿ ದಾನವಾಗಿ ನೀಡಿದ ವಿಷಯವು ಶಾಸನದಿಂದ ತಿಳಿದುಬರುತ್ತದೆ. ಇದರಿಂದ ಹುಳಿಯೂರಿನಲ್ಲಿ ಜೈನ ಬಸದಿ ಅಸ್ತಿತ್ವದಲ್ಲಿದ್ದುದನ್ನು ತಿಳಿಯಬಹುದು. ಅಲ್ಲದೆ, ಮಹಿಳೆಯೊಬ್ಬಳು ಬಸದಿಗೆ ಜಿನಮೂರ್ತಿಯನ್ನು ದಾನವಾಗಿ ನೀಡಿದ ಮೊದಲ ಉಲ್ಲೇಖಿತ ನಿದರ್ಶನಗಳಲ್ಲಿ ಹುಳಿಯೂರು ಬಸದಿಯ ಶಾಸನವೂ ಒಂದಾಗಿದೆ.[9]

**ಮಂದರಗಿರಿ ಬಸದಿ**

ಕ್ರಿ.ಶ. 1160ರ ಶಾಸನವು ಹೊಯ್ಸಳರ ಅರಸ ಪ್ರಥಮ ನರಸಿಂಹನ ದಂಡನಾಯಕನಾದ ಚಮೂಪತಿಯ ಆಡಳಿತದ ಕುರಿತು ಮಾಹಿತಿಯನ್ನು ನೀಡುತ್ತದೆ. ಈತನ ಆಡಳಿತಕ್ಕೆ ನರುವಲಿ, ಶೀತಕಲ್ ಮತ್ತು ಮಣ್ಣಿಕಲ್ವಳಿ ಪ್ರದೇಶಗಳು ಒಳಪಟ್ಟಿದ್ದವು. ಚಮೂಪತಿಯು ಮಂದಾರಗಿರಿಯಲ್ಲಿ ಒಂದು ಜಿನಾಲಯವನ್ನು ನಿರ್ಮಿಸಿದ ವಿಷಯವನ್ನು ಶಾಸನವು ಉಲ್ಲೇಖಿಸುತ್ತದೆ.[10] ಮಂದಾರಸ್ವಾಮಿ ಎಂಬ ವಿದೇಹ ತೀರ್ಥಂಕರರು ಇಲ್ಲಿ ವಾಸಿಸುತ್ತಿದ್ದುದರಿಂದ, ಮಂದಾರ ಪುಷ್ಪಗಳು ಹೆಚ್ಚಾಗಿ ಬೆಳೆಯುತ್ತಿದ್ದುದರಿಂದ ಹಾಗೂ ಈ ಪ್ರದೇಶವು ಏಕಶಿಲಾ ಬಂಡೆಯು ಆಮೆಯ ಆಕಾರದಲ್ಲಿದ್ದುದರಿಂದ 'ಮಂದಾರಗಿರಿ' ಎಂಬ ಹೆಸರು ಬಂದಿತೆಂದು ಹೇಳಲಾಗಿದೆ.[11]

ಚಮೂಪತಿಯ ಪತ್ನಿ ಮಾಚಿಯಕ್ಕಳು ಗಂಡವಿಮುಕ್ತ ಸಿದ್ಧಾಂತದೇವರ ಶಿಷ್ಯೆಯಾಗಿದ್ದಳು. ಆಕೆ ಮಯ್ದುವೊಳಲಿನಲ್ಲಿ ಒಂದು ಜಿನಾಲಯವನ್ನು ನಿರ್ಮಿಸಿದ್ದಳು. ಅಲ್ಲದೆ, 'ಪದ್ಮಾವತಿ' ಎಂಬ ಕೆರೆಯನ್ನು ನಿರ್ಮಿಸಿ ಅದನ್ನು ಬಸದಿಗೆ ದಾನವಾಗಿ ನೀಡಿದ ವಿಷಯವೂ ಶಾಸನಗಳಿಂದ ತಿಳಿದುಬರುತ್ತದೆ.

ಮಂದರಗಿರಿಯಲ್ಲಿ ಒಟ್ಟು ನಾಲ್ಕು ಜೈನ ಬಸದಿಗಳಿದ್ದವು ಎಂಬ ಉಲ್ಲೇಖಗಳು ದೊರೆಯುತ್ತವೆ. ಮೊದಲನೆಯದು ಚಂದ್ರನಾಥ ಬಸದಿ; ಇಲ್ಲಿ ಚಂದ್ರನಾಥ ತೀರ್ಥಂಕರನ ವಿಗ್ರಹವಿದೆ. ಎರಡನೆಯ ಬಸದಿಯಲ್ಲಿ ಸುಪಾರ್ಶ್ವನಾಥನ ವಿಗ್ರಹವಿದೆ. ಮೂರನೆಯ ಬಸದಿಯಲ್ಲಿ ಪಾರ್ಶ್ವನಾಥನ ಮೂರ್ತಿಯಿದ್ದು, ನಾಲ್ಕನೆಯ ಬಸದಿಯಲ್ಲಿ ಚಂದ್ರನಾಥನ ವಿಗ್ರಹವಿದೆ. ಎರಡನೆಯ ಮತ್ತು ನಾಲ್ಕನೆಯ ಬಸದಿಗಳು ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿದ್ದರೆ, ಮೊದಲನೆಯ ಮತ್ತು ಮೂರನೆಯ ಬಸದಿಗಳು 15ನೇ ಮತ್ತು 16ನೇ ಶತಮಾನಗಳಲ್ಲಿ ನಿರ್ಮಾಣಗೊಂಡಿವೆ ಎಂದು ತಿಳಿದುಬರುತ್ತದೆ. ಇಲ್ಲಿ ಬ್ರಹ್ಮಯಕ್ಷನ ಮಂದಿರವೂ ಇರುವುದನ್ನು ಕಾಣಬಹುದು.

**ಹೆಗ್ಗೆರೆ ಬಸದಿ**

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹೆಗ್ಗೆರೆಯಲ್ಲಿ ಜೈನ ಬಸದಿ ಕಂಡುಬರುತ್ತದೆ. ಈ ಪ್ರದೇಶವು

ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು. ಹೊಯ್ಸಳರ ಅರಸ ಪ್ರಥಮ ನರಸಿಂಹನ ಅಧೀನವತಿಯನಾದ ಚಟ್ಟಯ್ಯನು ಈ ಪ್ರದೇಶದ ಆಡಳಿತವನ್ನು ನಿರ್ವಹಿಸುತ್ತಿದ್ದನು. ಚಟ್ಟಯ್ಯ ಮತ್ತು ಶಾಂತಲೆಯವರು ಜೈನಧರ್ಮದ ಆರಾಧಕರಾಗಿದ್ದು, ಇತರ ಧರ್ಮಗಳಿಗೂ ಪ್ರೋತ್ಸಾಹ ನೀಡಿದವರಾಗಿದ್ದರು.

ಹೆಗ್ಗೆರೆಯಲ್ಲಿ ಹೊಯ್ಸಳರ ಕಾಲದ ಚನ್ನಪಾರ್ಶ್ವನಾಥ ಬಸದಿ ಇದೆ. ಈಗಾಗಲೇ ನಿರ್ಮಾಣಗೊಂಡಿದ್ದ ಈ ಬಸದಿಗೆ ಹೊಯ್ಸಳರ ಅರಸ ಪ್ರಥಮ ನರಸಿಂಹನು ಜಿನಾಲಯದ ನಿರ್ವಹಣೆಗಾಗಿ ದತ್ತಿ ನೀಡಿದ ವಿಷಯವನ್ನು ಶಾಸನವು ಉಲ್ಲೇಖಿಸುತ್ತದೆ. ಇದೇ ಶಾಸನದಲ್ಲಿ ಚಂದ್ರಾಯಣದೇವರ ಗಣದ ಶ್ರೀಮನ್ಮಹಾಸಾಮಂತನಾದ ಗೋವಿದೇವನು ತನ್ನ ಮನೋವಲ್ಲಭೆ ಮಹಾದೇವಿ ನಾಯಕಿತ್ತಿಗೆ ಪರೋಕ್ಷವಿನಯವಾಗಿ ಮಾಣಿಕ್ಯನಂದಿ ಸಿದ್ಧಾಂತದೇವರಿಗೆ ಬಸದಿಗಾಗಿ ಭೂಮಿಯನ್ನು ದಾನವಾಗಿ ನೀಡಿದ ವಿಷಯವೂ ಉಲ್ಲೇಖವಾಗಿದೆ.[12] ಮತ್ತೊಂದು ಶಾಸನದಲ್ಲಿ ಹೆಗ್ಗೆರೆ ಬಸದಿಗೆ ಬಲ್ಲಯ್ಯ ನಾಯಕನು ಹಿರಿಯಕೆರೆಯ ಕೆಳಗಿನ ಭೂಮಿಯನ್ನು ದಾನವಾಗಿ ನೀಡಿದ ವಿಷಯವು ದಾಖಲಾಗಿದೆ.[13]

**ಕರಡಾಳು ಬಸದಿ**

ಕರಡಾಳುವಿನಲ್ಲಿ ಬಸದಿ ಇದ್ದ ಬಗ್ಗೆ ಶಾಸನ ಸಂಖ್ಯೆ 17ರಲ್ಲಿ ಉಲ್ಲೇಖವಿರುವುದನ್ನು ಕಾಣಬಹುದು. ಈ ಶಾಸನವು ಕ್ರಿ.ಶ. 1174ಕ್ಕೆ ಸೇರಿದ್ದು, ಇಲ್ಲಿನ ಬಸದಿ ಈ ಕಾಲಕ್ಕಿಂತ ಪೂರ್ವದಲ್ಲಿಯೇ ನಿರ್ಮಾಣವಾಗಿರುವುದು ಕಂಡುಬರುತ್ತದೆ. ಈ ಬಸದಿಯಲ್ಲಿ ಕೊಂಡಕುಂದಾನ್ವಯಕ್ಕೆ ಸೇರಿದ ಚಾಂದ್ರಾಯಣದೇವ ಮುನಿಯು ವಾಸವಾಗಿದ್ದನೆಂದು ತಿಳಿದುಬರುತ್ತದೆ. ಇವರ ಶಿಷ್ಯೆ ಹಯ್ಯಲೆ/ಹರಿಯಲದೇವಿಯು ಅನುಪಮ ಜಿನಭಕ್ತೆಯಾಗಿದ್ದು, ಆಶ್ರಿತರನ್ನು ಪ್ರೀತಿಯಿಂದ ಸಲಹುತ್ತಿದ್ದಳೆಂದು ಶಾಸನದಿಂದ ತಿಳಿದುಬರುತ್ತದೆ. ಈಕೆಯು ಜಿನೇಂದ್ರನ ಪಾದಕಮಲದಲ್ಲಿ ಪಂಚಪದಗಳನ್ನು ಸ್ಮರಿಸುತ್ತಾ ಸಮಾಧಿಮರಣ ಹೊಂದಿದಳು ಎಂಬುದನ್ನೂ ಶಾಸನವು ತಿಳಿಸುತ್ತದೆ.[14]

**ನಿಟ್ಟೂರು ಬಸದಿ**

ಗುಬ್ಬಿ ತಾಲ್ಲೂಕಿನ ನಿಟ್ಟೂರನ್ನು ಕ್ರಿ.ಶ. 1226ರ ಶಾಸನದಲ್ಲಿ 'ತೆಂಕಣಯ್ಯವಳೆ' ಎಂದು ಉಲ್ಲೇಖಿಸಲಾಗಿದೆ. ಇದರಿಂದ ನಿಟ್ಟೂರು ಹೊಯ್ಸಳರ ಕಾಲದಲ್ಲಿ ಪ್ರಮುಖ ಮಹಾಪಟ್ಟಣ ಹಾಗೂ ವ್ಯಾಪಾರ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ. ನಿಟ್ಟೂರಿನಲ್ಲಿ ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಶಾಂತಿನಾಥನ ಜಿನಾಲಯವಿದೆ. ಬಸದಿಯ ಮೂಲವಿಗ್ರಹವಾದ ಶಾಂತಿನಾಥನ ವಿಗ್ರಹವು ಭಗ್ನಗೊಂಡಿರುವ ಕಾರಣ, ಪ್ರಸ್ತುತ ಆದಿನಾಥನ ವಿಗ್ರಹವನ್ನು ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾಗಿದೆ. ಈ ಬಸದಿಗೆ ಹೊಂದಿಕೊಂಡಂತೆ ಪದ್ಮಾವತಿ ಗುಡಿ ಹಾಗೂ ಜ್ವಾಲಾಮಾಲಿನಿಯ ಮೂರ್ತಿಗಳಿವೆ.

ಈ ಬಸದಿಯಲ್ಲಿ ಕ್ರಿ.ಶ. 1200ರ ಕಾಲಕ್ಕೆ ಸೇರಿದ ನಿಸಿದಿ ಶಾಸನಗಳು ಕಂಡುಬರುತ್ತವೆ. ಈ ಬಸದಿ ಮೂಲಸಂಘದ ದೇಶೀಯಗಣದ ಪುಸ್ತಕಗಚ್ಚಕ್ಕೆ ಸೇರಿದ್ದೆಂದು ತಿಳಿದುಬರುತ್ತದೆ. ಬಸದಿಯ ಹೊರಭಿತ್ತಿಯಲ್ಲಿ ಮಾಳವ್ವೆ ಸೆಟ್ಟಿಕಬ್ಬೆಯರ ಮಗ ಮಲ್ಲಿಸೆಟ್ಟಿಯು ತೀರ್ಥಂಕರನ ಮೂರ್ತಿಯನ್ನು ಕೆತ್ತಿಸಿದ ವಿಷಯವು ಶಾಸನದಲ್ಲಿ ಕಂಡುಬರುತ್ತದೆ. ಕ್ರಿ.ಶ. 1272ಕ್ಕೆ ಸೇರಿದ ಮತ್ತೊಂದು ಶಾಸನದಲ್ಲಿ ಮೊಯಿಂದಸೆಟ್ಟಿಯ ಮಗ ಪದುಮಸೆಟ್ಟಿಯು ಪದ್ಮಾವತಿ ದೇವಿಗೆ ಕಂಚಿನ ಪೀಠವನ್ನು ಮಾಡಿಸಿದ ವಿಷಯವು ದಾಖಲಾಗಿದೆ. ಮತ್ತೊಂದು 12ನೇ ಶತಮಾನದ ಶಾಸನದಲ್ಲಿ ಶಾಂತಿನಾಥ ಬಸದಿಯ ನವರಂಗದ ಬಾಗಿಲುವಾಡದಲ್ಲಿದ್ದ ಪ್ರತಿಮೆಯನ್ನು ಮಾಳವ್ವೆಯ ಮಗ ಮಲೆಯನು ಕೆತ್ತಿಸಿದ ವಿಷಯವು ಉಲ್ಲೇಖವಾಗಿದೆ.[15]

**ನಿಡಗಲ್ಲು ಬಸದಿ**

ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ನಿಡಗಲ್ಲಿನಲ್ಲಿ ಕ್ರಿ.ಶ. 1232ಕ್ಕೆ ಸೇರಿದ ಶಾಸನವೊಂದು ಬಸದಿಯ ಒಳಭಾಗದಲ್ಲಿದೆ. ಇಲ್ಲಿ ಪಾರ್ಶ್ವನಾಥನ ಬಸದಿ ಇದ್ದು, ಶಾಸನ ಸಂಖ್ಯೆ 70ರಲ್ಲಿ ನಿಡಗಲ್ಲನ್ನು ಆಳುತ್ತಿದ್ದ ಇರುಂಗೊಳದೇವನ ಅಧಿಕಾರಿಯಾದ ಗಂಗೆಯನಾಯಕ ಮತ್ತು ಆತನ ಪುತ್ರ ಮಾರೆಯನ ಕುರಿತು ಮಾಹಿತಿ ದೊರೆಯುತ್ತದೆ.

ಮಾರೆಯನು ಮೂಲಸಂಘದ ದೇಶೀಯಗಣ, ಕೊಂಡಕುಂದಾನ್ವಯದ ಪುಸ್ತಕಗಚ್ಛಕ್ಕೆ ಸೇರಿದ ವಾಣದ ಬಳಿಯ ವೀರನಂದಿ ಸಿದ್ಧಾಂತ ಚಕ್ರವರ್ತಿಗಳ ಶಿಷ್ಯ ಪದ್ಮಪ್ರಭಮಲಧಾರಿ ದೇವರ ಶಿಷ್ಯ ನೇಮಿಪಂಡಿತರಿಂದ ವ್ರತವನ್ನು ಸ್ವೀಕರಿಸಿದ್ದನು. ಮಾರೆಯನು ಪಾರ್ಶ್ವನಾಥ ಬಸದಿಯನ್ನು ನಿರ್ಮಿಸಿದ ವಿಷಯವನ್ನು ಶಾಸನವು ಉಲ್ಲೇಖಿಸುತ್ತದೆ.[16] ಅಲ್ಲದೆ, ತಟಾಕವನ್ನು ನಿರ್ಮಿಸಿ ಬಸದಿಗೆ ನೀಡಿದ ವಿಷಯವೂ ದಾಖಲಾಗಿದೆ. ಈ ಬಸದಿಯ ಪಾರ್ಶ್ವನಾಥನ ಪ್ರತಿಮೆಯನ್ನು ಬೆಳ್ಳುಂಬಟ್ಟೆಯ ಭವ್ಯಜನರು ಮಾಡಿಸಿದರೆಂಬ ಉಲ್ಲೇಖವೂ ದೊರೆಯುತ್ತದೆ.[17]

**ಹಟ್ಟಣ ಬಸದಿ**

ತಿಪಟೂರು ತಾಲ್ಲೂಕಿನ ಹಟ್ಟಣದಲ್ಲಿ ಬಸದಿ ನಿರ್ಮಿಸಿದ ಬಗ್ಗೆ ಶಾಸನ ಸಂಖ್ಯೆ 96ರಲ್ಲಿ ಉಲ್ಲೇಖವಿದೆ. ಹೊಯ್ಸಳರ ಅರಸ ವೀರಬಲ್ಲಾಳನ ಕಾಲದಲ್ಲಿ ಸೇವೆ ಸಲ್ಲಿಸುತ್ತಿದ್ದ ಸಾಮಂತ ಮಾಚಯ್ಯ ಮತ್ತು ಮಾಕಲದೇವಿಯರು ಜೈನಧರ್ಮದ ಅನನ್ಯ ಭಕ್ತರಾಗಿದ್ದರು. ಇವರಿಬ್ಬರೂ ಸೇರಿ ಬೆಳಗೆರೆ ಗ್ರಾಮದಲ್ಲಿ ಚೈತ್ಯಗೃಹವನ್ನು ನಿರ್ಮಿಸಿ, ಅದಕ್ಕೆ ದಾನ ನೀಡಿದ ವಿಷಯವನ್ನು ಶಾಸನವು ದಾಖಲಿಸಿದೆ.

ಈ ಬಸದಿ ಮೂಲಸಂಘದ ದೇಶೀಯಗಣದ ಪುಸ್ತಕಗಚ್ಛದ ಕೊಂಡಕುಂದಾನ್ವಯಕ್ಕೆ ಸೇರಿದ್ದೆಂದು ತಿಳಿದುಬರುತ್ತದೆ.[18] 12ನೇ ಶತಮಾನಕ್ಕೆ ಸೇರಿದ ಮತ್ತೊಂದು ಶಾಸನದಲ್ಲಿ ಹೊಯ್ಸಳರ ಅರಸ ಬಲ್ಲಾಳನ ಸೇನಾಧಿಪತಿಯಾದ ಮರಿಯಾನೆ ದಂಡನಾಯಕನು ಬೆಳಗೆರೆ ಪಟ್ಟಣದ ನಖರರೊಂದಿಗೆ ಸೇರಿ ತಿಪಟೂರು ತಾಲ್ಲೂಕಿನ ಹಟ್ಟಣ ಬಸದಿಗೆ ಜೈನಮೂರ್ತಿಯನ್ನು ನಿರ್ಮಿಸಿಕೊಟ್ಟ ವಿಷಯವನ್ನು ಉಲ್ಲೇಖಿಸಲಾಗಿದೆ.[19]

**ಅಮರಾಪುರ ಜಿನಾಗವಟ್ಟಿಗೆ ಬ್ರಹ್ಮಜಿನಾಲಯ**

ಶಿರಾ ತಾಲ್ಲೂಕಿನ ಕೆರೆಯ ಬಳಿ ದೊರೆತಿರುವ ಕ್ರಿ.ಶ. 1277ಕ್ಕೆ ಸೇರಿದ ಶಾಸನವು ತೈಲಂಗೆರೆಯ ಜಿನಾಗವಟ್ಟಿಗೆ ಬ್ರಹ್ಮಜಿನಾಲಯದ ಕುರಿತು ಮಾಹಿತಿಯನ್ನು ನೀಡುತ್ತದೆ. ಮೂಲಸಂಘದ ದೇಶೀಯಗಣದ ಪುಸ್ತಕಗಚ್ಛದ ಇಂಗಳೇಶ್ವರದ ಬಳಿಯ ಪ್ರಭುವನ ಕೇತ್ತಿರಾವುಳರ ಶಿಷ್ಯ ಬಾಳೇಂದು ಮಲಧಾರಿದೇವರ ಶಿಷ್ಯ ಸಂಗಯ್ಯನ ಬೆಂಮಿಸೆಟ್ಟಿಗೆ ಮೇಳವ್ವೆಗಂ ಹುಟ್ಟಿದ ಮಲ್ಲಸೆಟ್ಟಿಯು ತೈಲಂಗೆರೆಯ ಬಸದಿಗೆ ಪ್ರಸನ್ನಪಾರ್ಶ್ವದೇವರ ಮಕ್ಕಳಿಗೆ ತನ್ನ ಪಾಲಿನ 2000 ಅಡಿಕೆ ಮರಗಳನ್ನು ದಾನವಾಗಿ ನೀಡಿದ ವಿಷಯವನ್ನು ಶಾಸನವು ಉಲ್ಲೇಖಿಸುತ್ತದೆ. ಅಲ್ಲದೆ, ಈ ಬಸದಿಯಲ್ಲಿ ಪೂಜೆ ಹಾಗೂ ಕೈಂಕರ್ಯಗಳನ್ನು ನೆರವೇರಿಸಲು ತಮಿಳುನಾಡಿನಿಂದ ಕರೆತಂದಿದ್ದ ಬಾಳೇಂದು ಮಲಧಾರಿದೇವರ ಪ್ರಿಯಶಿಷ್ಯ ಚೆಲ್ಲಿಪಿಳ್ಳೆಗೆ ದತ್ತಿ ನೀಡಿದ ವಿಷಯವೂ ದಾಖಲಾಗಿದೆ.[20]

**ಕುಚ್ಚಂಗಿ ಬಸದಿ**

ತುಮಕೂರಿನಿಂದ ಸುಮಾರು 6 ಕಿ.ಮೀ. ದೂರದಲ್ಲಿರುವ ಕುಚ್ಚಂಗಿಯಲ್ಲಿ ಕ್ರಿ.ಶ. 1180ಕ್ಕೆ ಸೇರಿದ ಶಾಸನವಿದೆ.[21] ಈ ಶಾಸನವು ಮೂಲಸಂಘದ ದೇಶೀಯಗಣದ ಪುಸ್ತಕಗಚ್ಛದ ಹನಸೋಗೆಯ ಬಳಿಯ ಕೊಂಡಕುಂದಾನ್ವಯದ ನಾಯಕೀರ್ತಿ ಸಿದ್ಧಾಂತ ಚಕ್ರವರ್ತಿಯ ಶಿಷ್ಯ ಬಾಳಚಂದ್ರದೇವರ ಶಿಷ್ಯ ಕೇಸರಿಸೆಟ್ಟಿಯ ಮಗ ಬಮ್ಮಿಸೆಟ್ಟಿಯು ಬೆಳ್ಳೂರಿನಲ್ಲಿ ಬಸದಿ ನಿರ್ಮಿಸಿದ ವಿಷಯವನ್ನು ತಿಳಿಸುತ್ತದೆ. ಕುಚ್ಚಂಗಿಯಲ್ಲಿ ಪಾರ್ಶ್ವನಾಥ ಜಿನಾಲಯವನ್ನು ನಿರ್ಮಿಸಿದ ವಿಷಯವೂ ತಿಳಿದುಬರುತ್ತದೆ.

ಕ್ರಿ.ಶ. 1573ಕ್ಕೆ ಸೇರಿದ ಮತ್ತೊಂದು ಶಾಸನದಲ್ಲಿ ಬಮ್ಮಿಸೆಟ್ಟಿಯ ಮಗ ದಾನಪ್ಪ ಮತ್ತು ಪಾಯಣನು ಚಂದ್ರಪ್ರಭಸ್ವಾಮಿಯ ಪೀಠ ಹಾಗೂ ಪ್ರಭಾವಳಿಯನ್ನು ಮಾಡಿಸಿದ ವಿಷಯವು ದಾಖಲಾಗಿದೆ. ಮೊದಲಿಗೆ ಈ ಬಸದಿಯಲ್ಲಿ ಪಾರ್ಶ್ವನಾಥಸ್ವಾಮಿಯ ಪೂಜೆ ನಡೆಯುತ್ತಿದ್ದು, ಕಾಲಾನಂತರದಲ್ಲಿ ಚಂದ್ರಪ್ರಭಸ್ವಾಮಿಯನ್ನು ಪ್ರತಿಷ್ಠಾಪಿಸಿರುವುದಾಗಿ ತಿಳಿದುಬರುತ್ತದೆ.[22] ಜಿ. ಬ್ರಹ್ಮಪ್ಪನವರು ಕುಚ್ಚಂಗಿಯ ಬಸದಿಯು ಪ್ರಾಚೀನ ಜಿನಮಂದಿರವಾಗಿತ್ತೆಂದು ದಾಖಲಿಸಿದ್ದಾರೆ.[23]

**ಸಂಪಿಗೆಯ ಬಸದಿ**

ಜಿ. ಬ್ರಹ್ಮಪ್ಪನವರು ಗುಬ್ಬಿಗೆ ಸಮೀಪವಿರುವ ನಿಟ್ಟೂರು ಸಂಪಿಗೆಯಲ್ಲಿ ಆದೀಶ್ವರ ಜಿನಾಲಯವಿದ್ದುದನ್ನು ದಾಖಲಿಸಿದ್ದಾರೆ. ಕಾಲಕ್ರಮೇಣ ಈ ಜಿನಾಲಯವು ಶಿಥಿಲಗೊಂಡಿತು. ಅಲ್ಲಿನ ಮೂಲವಿಗ್ರಹವಾದ ಆದಿನಾಥನ ಜಿನಬಿಂಬವನ್ನು 1934ರಲ್ಲಿ ಗುಬ್ಬಿಗೆ ತಂದು, ಹೊಸ ಜಿನಾಲಯವನ್ನು ನಿರ್ಮಿಸಿ ಪ್ರತಿಷ್ಠಾಪಿಸಲಾಯಿತು ಎಂದು ಅವರು ದಾಖಲಿಸಿದ್ದಾರೆ.

**ಮಧುಗಿರಿ ಬಸದಿ**

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ಕೇಂದ್ರವಾಗಿದ್ದು, ಶಾಸನ ಸಂಖ್ಯೆ 91ರಲ್ಲಿ ಮಧುಗಿರಿಯಲ್ಲಿ ಮಲ್ಲಿನಾಥ ಬಸದಿ ಇದ್ದ ಬಗ್ಗೆ ಉಲ್ಲೇಖವಿದೆ. ಈ ಶಾಸನವು ಕ್ರಿ.ಶ. 1650ಕ್ಕೆ ಸೇರಿದ್ದು, ಇದಕ್ಕಿಂತ ಪೂರ್ವದಲ್ಲಿಯೇ ಇಲ್ಲಿ ಬಸದಿ ಅಸ್ತಿತ್ವದಲ್ಲಿದ್ದುದನ್ನು ತಿಳಿಯಬಹುದು. ಶಾಸನದಲ್ಲಿ ಸರ್ವಜ್ಞಸೆಟ್ಟಿ, ಆತನ ತಮ್ಮ ಗೆಲುವಯ್ಯ ಹಾಗೂ ಗೆಲುವಯ್ಯನ ಮಗ ಚಿಕ್ಕದೇಮಣ್ಣನು ಈ ಬಸದಿಯ ಗರ್ಭಗುಡಿಯ ಶಿಖರವನ್ನು ನಿರ್ಮಿಸಿದ ವಿಷಯವು ತಿಳಿದುಬರುತ್ತದೆ.[24]

ಮತ್ತೊಂದು ಶಾಸನದಲ್ಲಿ ಶ್ರೀಪಾರ್ಶ್ವನಾಥಸ್ವಾಮಿ ದೇವರಿಗೆ ವೀರಪ್ಪನು ದಾನ ನೀಡಿದ ವಿಷಯವನ್ನು ಉಲ್ಲೇಖಿಸಲಾಗಿದೆ. ಜಿ. ಬ್ರಹ್ಮಪ್ಪನವರು ತಮ್ಮ ಗ್ರಂಥದಲ್ಲಿಯೂ ಮಧುಗಿರಿಯಲ್ಲಿ ಮಲ್ಲಿನಾಥಸ್ವಾಮಿಯ ಪುರಾತನ ಜಿನಾಲಯವಿದ್ದ ಬಗ್ಗೆ ದಾಖಲಿಸಿದ್ದಾರೆ.

**ನೀಲತ್ತಹಳ್ಳಿ ಬಸದಿ**

ಕ್ರಿ.ಶ. 1534ಕ್ಕೆ ಸೇರಿದ ಶಾಸನದಲ್ಲಿ ಗಣಪದ ಮಾಚರಸಯ್ಯ ಸೆಟ್ಟಿಯು ಅನಂತನಾಥ ಚೈತ್ಯಾಲಯದಲ್ಲಿ ಧರ್ಮಪ್ರವಚನ ನಡೆಸಿದ ವಿಷಯವು ಉಲ್ಲೇಖವಾಗಿದೆ. ಇದರಿಂದ ನೀಲತ್ತಹಳ್ಳಿಯಲ್ಲಿ ಅನಂತನಾಥ ಚೈತ್ಯಾಲಯವಿದ್ದುದನ್ನು ದೃಢಪಡಿಸಬಹುದು.[25]

**ಕಸಬೆ ಬಸದಿ**

ಕರ್ನಾಟಕ ಜೈನ ಶಾಸನ ಸಂಪುಟದಲ್ಲಿ ಉಲ್ಲೇಖಿಸಿರುವಂತೆ, ಕಸಬೆಯಲ್ಲಿ ಶಾಂತೇಶ್ವರ ಬಸದಿ ಇದ್ದ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ಬಸದಿಯ ಬಾಗಿಲುವಾಡವನ್ನು ಮಾಳವ್ವೆಯ ಮಲ್ಲಯ್ಯ ಎಂಬುವನು ನಿರ್ಮಿಸಿದ ವಿಷಯವು ಶಾಸನದಲ್ಲಿ ತಿಳಿದುಬರುತ್ತದೆ. ಈ ಬಾಗಿಲುವಾಡವನ್ನು 17ನೇ ಶತಮಾನದಲ್ಲಿ ನಿರ್ಮಿಸಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

**ತೋವಿನಕೆರೆ ಬಸದಿ**

ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ತೋವಿನಕೆರೆಯಲ್ಲಿ ತೇದಿರಹಿತ ಶಾಸನವೊಂದು ದೊರೆತಿದ್ದು, ಅದರಲ್ಲಿ ಜೈನ ತೀರ್ಥಂಕರರಾದ ಶ್ರೀ ನೇಮಿಚಂದ್ರಸ್ವಾಮಿಯ ಉಲ್ಲೇಖವಿದೆ.[26] ಜಿ. ಬ್ರಹ್ಮಪ್ಪನವರು ತೋವಿನಕೆರೆಯಲ್ಲಿ ಚಂದ್ರನಾಥ ಬಸದಿ ಇದ್ದ ಬಗ್ಗೆ ದಾಖಲಿಸಿದ್ದಾರೆ. ಅಲ್ಲದೆ, ತೋವಿನಕೆರೆಯು ಜೈನ ಕವಿ ಮತ್ತು ಜೈನಸಿದ್ಧರಿಗೆ ಜನ್ಮಭೂಮಿಯಾಗಿದ್ದ ಬಗ್ಗೆಯೂ ಅವರು ಉಲ್ಲೇಖಿಸಿದ್ದಾರೆ.

**ಇಟ್ಟಿಗೆದಿಬ್ಬನಹಳ್ಳಿ ಬಸದಿ**

ಮಧುಗಿರಿ ತಾಲ್ಲೂಕಿನ ಇಟ್ಟಿಗೆದಿಬ್ಬನಹಳ್ಳಿಯಲ್ಲಿ ಕ್ರಿ.ಶ. 18ನೇ ಶತಮಾನಕ್ಕೆ ಸೇರಿದ ಶಾಸನವೊಂದು

ಬಸದಿಗುಡಿಯ ಮುಂದಿನ ತೊಲೆಯ ಕಲ್ಲಿನಲ್ಲಿದೆ. ಈ ಶಾಸನದಲ್ಲಿ ತಾರಣ ಸಂವತ್ಸರದ ಮಾಘ ಮಾಸದಲ್ಲಿ ಶ್ರೀಮಹಾಶಿವರ ಬೊಂಮಿಸೆಟ್ಟಿಯ ಮಗ ಅಂತ್ತಿಬಸೆಟ್ಟಿ ಕಟ್ಟಿಸಿದ ಬ್ರಹ್ಮದೇವರ ಮಂಟಪದ ಕುರಿತು ಉಲ್ಲೇಖವಿದೆ. ಇದರಿಂದ ಇಲ್ಲಿ ಬಸದಿ ಅಸ್ತಿತ್ವದಲ್ಲಿದ್ದುದನ್ನು ಸ್ಪಷ್ಟವಾಗಿ ತಿಳಿಯಬಹುದು. ಆದರೆ ಇದು ಯಾವ ತೀರ್ಥಂಕರನ ಬಸದಿ ಎಂಬುದು ತಿಳಿದುಬರುವುದಿಲ್ಲ. ಬಹುಶಃ ಇದು ಪಾರ್ಶ್ವನಾಥನ ಬಸದಿ ಆಗಿರಬಹುದೆಂದು ಅಭಿಪ್ರಾಯಪಡಬಹುದು.

**ರಾಮಾಪುರ ಬಸದಿ**

ಮಧುಗಿರಿ ತಾಲ್ಲೂಕಿನ ರಾಮಾಪುರದಲ್ಲಿ ಅನಂತನಾಥ ಬಸದಿ ಇದ್ದ ವಿಷಯವು ಶಾಸನದಿಂದ ತಿಳಿದುಬರುತ್ತದೆ. ಈ ಶಾಸನವು ಕ್ರಿ.ಶ. 1847ಕ್ಕೆ ಸೇರಿದ್ದು, ಇದರಲ್ಲಿ ಪ್ಲವಂಗ ಸಂವತ್ಸರದ ಭಾದ್ರಪದ ಶುದ್ಧ 12 ಎಂದು ಉಲ್ಲೇಖಿಸಲಾಗಿದೆ. ಆ ದಿನದಂದು ಅನಂತನಾಥ ಬಸದಿಯ ಜಿನವಿಗ್ರಹವನ್ನು ಪ್ರತಿಷ್ಠಾಪಿಸಿರುವುದಾಗಿ ತಿಳಿದುಬರುತ್ತದೆ.[27]

**ಬಿಳುಗಲಿ ಬಸದಿ**

ಬಿಳುಗಲಿಯು ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸಮೀಪದಲ್ಲಿರುವ ಒಂದು ಗ್ರಾಮವಾಗಿದೆ. ಈ ಗ್ರಾಮದಲ್ಲಿ ಒಂದು ಬಸದಿ ಇದ್ದ ಬಗ್ಗೆ ಜಿ. ಬ್ರಹ್ಮಪ್ಪನವರು ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

**ಬಿದರೆ ಬಸದಿ**

ಗುಬ್ಬಿ ತಾಲ್ಲೂಕಿಗೆ ಸೇರಿದ ಬಿದರೆಯಲ್ಲಿ ಒಂದು ಜಿನಾಲಯವಿದ್ದ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಜಿನಾಲಯದ ಪಕ್ಕದಲ್ಲಿಯೇ ಚಂದ್ರಕೀರ್ತಿ ಮುನಿಗಳ ವಂಶದವರಾದ ಚಿಕ್ಕಣ್ಣಯ ಸ್ವಾಮಿಗಳ ಪಾದುಕೆಗಳಿದ್ದವು ಎಂಬ ಮಾಹಿತಿಯೂ ದೊರೆಯುತ್ತದೆ. ಈ ಬಸದಿ ಮಲ್ಲುಸುಪಾರ್ಶ್ವನಾಥ ಬಸದಿಯಾಗಿತ್ತೆಂದು ತಿಳಿದುಬರುತ್ತದೆ.

**ಉಲ್ಲೇಖಗಳು**


1. ಶುಭಚಂದ್ರ, ಜೈನ ಸಾಹಿತ್ಯ ಮತ್ತು ಸಂಸ್ಕೃತಿ ಕೆಲವು ಅಧ್ಯಾಯ, ಪು.ಸಂ.20
2. ಶ್ರವಣಬೆಳಗೊಳ – ಶಾಸನ ಸಂಖ್ಯೆ 26, ಪು.ಸಂ.140
3. ಹಂಪನಾ, ಅನನ್ಯ, ಪು.ಸಂ.214
4. ಕ,ಜೈ, ಶಾ.ಸಂ.05, ಪು.ಸಂ.400–405 ಕಾಲ – 717
5. ಎ.ಕ.24 ಶಾಸನ 16, ಪು.ಸಂ.270–274, ಕಾಲ –813
6. ಎ.ಕ.25 ಶಾಸನ 161 – ಪು.ಸಂ.416–418 ತೇದಿರಹಿತ
7. ಎ.ಕ.24 ಶಾಸನ 11 ಪು.ಸಂ.7 – 15, ಕಾಲ –1151
8. ಎ.ಕ.24 ಶಾಸನ 74 ಪು.ಸಂ.205, ಕಾಲ – 1157
9. ಎ.ಕ.24 ಶಾಸನ 101 ಪು.ಸಂ.517 – 18, ಕಾಲ –1160
10. ಎ.ಕ.24 ಶಾಸನ 61 ಪು.ಸಂ.125– 128, ಕಾಲ –1160
11. ತುಮಕೂರು ಸುನಂದಾ – ಬಸದಿ ಬೆಟ್ಟ ಒಂದು ಅಧ್ಯಯನ ಮುಕ್ಕೋಡೆ ಪು.ಸಂ.49–51
12. ಎ.ಕ.24 ಶಾಸನ 104 ಪು.ಸಂ.519 – 524, ಕಾಲ –1161
13. ಎ.ಕ.24 ಶಾಸನ 105 ಪು.ಸಂ.524, ಕಾಲ – 1161
14. ಎ.ಕ.24 ಶಾಸನ 17 ಪು.ಸಂ.445 – 46, ಕಾಲ –1174
15. ಶ್ರೀನಿವಾಸ್ ನಿಟ್ಟೂರಿನ ಶಾಂತಿನಾಥ ಜಿನಾಲಯ, ಇತಿಹಾಸ ದರ್ಶನ – ಸಂ, 27, ಪು.ಸಂ.161
16. ಎ.ಕ.24 ಶಾಸನ 48 ಪು.ಸಂ.315 – 18, ಕಾಲ –1219

17. ಎ.ಕ.24 ಶಾಸನ 52, ಪು.ಸಂ.317, ಕಾಲ – 1272
18. ಎ.ಕ.24 ಶಾಸನ 70 ಪು.ಸಂ.191–193, ಕಾಲ –13ನೇ ಶತಮಾನ
19. ಎ.ಕ.24 ಶಾಸನ 86 ಪು.ಸಂ.207, ಕಾಲ – 13ನೇ ಶತಮಾನ
20. ಎ.ಕ.25 ಶಾಸನ 96 ಪು.ಸಂ.516 – 159, ಕಾಲ –1216
21. ಎ.ಕ.25 ಶಾಸನ 03 ಪು.ಸಂ.299 – 300, ಕಾಲ –1262
22. ಎ.ಕ.24 ಶಾಸನ 07 ಪು.ಸಂ.05, ಕಾಲ – 12ನೇ ಶತಮಾನ
23. ಎ.ಕ.24 ಶಾಸನ 08 ಪು.ಸಂ.05, ಕಾಲ – 1573
24. ಎ.ಕ.25 ಶಾಸನ 09 ಪು.ಸಂ.89, ಕಾಲ – 1650
25. ಎ.ಕ.24 ಶಾಸನ 42 ಪು.ಸಂ.217 – 18, ಕಾಲ –1534
26. ಎ.ಕ.24 ಶಾಸನ 29 ಪು.ಸಂ.18, ಕಾಲ – 16ನೇ ಶತಮಾನ
27. ಎ.ಕ.24 ಶಾಸನ 105 ಪು.ಸಂ.96, ಕಾಲ – 1847